ಅಧ್ಯಕ್ಷರು.—ಇಲ್ಲಿ ಇಲ್ಲ ಎನ್ನುವ ಪ್ರಶ್ನೆ ಇಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ಅವರ ಗ್ರಾಮದಲ್ಲಿ ಏನೋ ಗಲಭೆಯಾಗಿದೆ. ಶಾಂತಿ ಕಾಪಾಡುವುದಕ್ಕೆ ಮಾತನಾಡುತ್ತಿದ್ದಾರೆ. ಏತಕ್ಕೆ ತಕರಾರು ? ಇರಲಿಬಿಡಿ. ಮಾತನಾಡಲಿ.

ಶ್ರೀ ಕೆ. ಹೆಚ್. ಹನುಮೇಗೌಡ.—ವಾಟಾಳ್ ನಾಗರಾಜ್‌ರವರು ಏನಾದರೂ ಮತ್ತೆ ಇನ್ನೊಂದು ಸಾರಿ ಎದ್ದರೆ ಅವರು ಮಾತನಾಡುವಾಗಲೆಲ್ಲ ನಾನು ಸಹ ಹತ್ತು–ಹತ್ತು ನಿಮಿಷಕ್ಕೆ ಎದ್ದುನಿಂತುಕೊಳ್ಳುತ್ತೇನೆ. ಅದ್ದರಿಂದ ದಯಮಾಡಿ ತಾವು ಸುಮ್ಮನೆ ಕುಳಿತುಕೊಳ್ಳಿ. ನಾನು ಮಾತನಾಡುತ್ತೇನೆ.

ಅಧ್ಯಕ್ಷರು.—ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್.—ನಾನು ಹೊರಗಡೆ ಹೋಗುತ್ತೇನೆ. ತಾವು ಅವಕಾಶ ಕೊಡಿ. ಈ ರೀತಿ ಮಾತುಗಳನ್ನು ಕೇಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ರಣರಂಗ ಮಾಡುವುದಲ್ಲ ಅವರು. ಸದನದ ಸದಸ್ಯರು ಇಲ್ಲದೇ ಇರುವಾಗ ಅವರ ವಿರುದ್ಧ ಮಾತನಾಡುವುದಕ್ಕೆ ಅವಕಾಶ ಕೊಡುವುದಾದರೆ, ಈ ಸದನ ಏತಕ್ಕೆ ಬೇಕು ? ಈ ಸದನವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು, ಕಮರುಲ್ ಇಸ್ಲಾಂರವರು,

ಶ್ರೀ ರುಕ್ಮಯ್ಯ ಪೂಜಾರಿಯವರು ಸದನದಿಂದ ಹೊರನಡೆದರು.)

ಶ್ರೀ ಕೆ. ಎಚ್. ಹನುಮೇಗೌಡ.—ಗ್ರಾಮ ಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಹಸ್ತಕ್ಷೇಪ ನಡೆದಿದೆ, ಬೇಕಾದಷ್ಟು ಅನ್ಯಾಯಗಳು ನಡೆದಿದೆ ಎನ್ನುವುದರ ಬಗ್ಗೆ ವಿವರಗಳನ್ನು ಅವರು ಕೇಳಿಕೊಂಡಿದ್ದಾರೆ. ನಾನು ಸರ್ಕಾರದ ಬಗ್ಗೆ ಮತ್ತು ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ೨–೩ ವಿಷಯಗಳನ್ನು ಮಾತನಾಡಿ ಸ್ಪಷ್ಟೀಕರಣ ಕೊಡುತ್ತೇನೆ. ೧೦ ದಿವಸಗಳ ಹಿಂದೆ ಪಟ್ಟದಕೆರೆ ಎಂಬ ಗ್ರಾಮದಲ್ಲಿ ಗ್ರಾಮ ಪಂಚಾಯತಿ ಚುನಾವಣೆ ನಡೆಯಿತು. ಚುನಾವಣೆಯಲ್ಲಿ ಒಟ್ಟು ೧೫ ಸದಸ್ಯರು ಆಯ್ಕೆಯಾಗಿದ್ದು, ಅದರಲ್ಲಿ ೧೨ ಜನ ಕಾಂಗ್ರೆಸ್‌ನವರು ಉಳಿದ ಮೂರು ಜನ ಜನತಾ ದಳಕ್ಕೆ ಸೇರಿದವರು. ಚುನಾವಣೆ ಸಂದರ್ಭದಲ್ಲಿ ನಮ್ಮ ಪಕ್ಷಕ್ಕೆ ಸೇರಿದ ಕೆಲವರು ಸತ್ತರು, ಅದರ ಬಗ್ಗೆ ನನ್ನ ಚಿಂತೆ ಇಲ್ಲ. ಚುನಾವಣೆ ೧೨ ಗಂಟೆಗೆ ಇದ್ದು, ಹರಿಜನ ಮಹಿಳೆಯಾದ ಭಾಗ್ಯಮ್ಮ ಎಂಬುವವರು ಕಾಂಗ್ರೆಸ್ ಪಕ್ಷದವರೊಡನೆ ಸೇರಿಕೊಂಡು ವೋಟಿಂಗ್ ಹೋಗುವ ತಯಾರಿಯಲ್ಲಿದ್ದಾಗ ಜನತಾ ದಳದ ಕೆಲವು ಮುಖಂಡರುಗಳು ಬಂದು ಆಕೆಯ ಗಂಡನನ್ನು ಬಲವಂತವಾಗಿ ಎಳೆದುಕೊಂಡು ಹೋದರು.

ಅಧ್ಯಕ್ಷರು.—ಈಗ ತಮ್ಮ ಮೇಲೆ ಏನು ಆರೋಪ ಇದೆ, ಅದನ್ನು ನಿರಾಕರಿಸುವ ಬಗ್ಗೆ ಮಾತ್ರ ಹೇಳಿ, ಉಳಿದ ವಿಷಯಗಳನ್ನು ಪ್ರಸ್ತಾಪಿಸುವುದು ಬೇಡ.

ಶ್ರೀ ಕೆ. ಎಚ್. ಹನುಮೇಗೌಡ.—ತಾವೇ ಇದನ್ನೆಲ್ಲಾ ಮಾಡಿ ನಮ್ಮ ಮೇಲೆ ಹೇಗೆ ಗೂಬೆ ಕೂರಿಸುತ್ತಾರೆ ಎನ್ನುವುದನ್ನು ಹೇಳುತ್ತಿದ್ದೇನೆ. ಅದನ್ನು ಹೇಳಬಾರದೆ?

ಅಧ್ಯಕ್ಷರು.—ಇದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳಿ. ಚುನಾವಣೆಯ ವಿಚಾರ ಹೇಳಬೇಡಿ, ತಮ್ಮ ಮೇಲಿನ ಆರೋಪವೇನಿದೆ, ಅದನ್ನು ನಿರಾಕರಣೆ ಮಾಡಿ.

ಶ್ರೀ ಕೆ. ಎಚ್. ಹನುಮೇಗೌಡ.—ನಾನು ಸ್ಪಷ್ಟಪಡಿಸುತ್ತಿರುವುದೇನೆಂದರೆ, ಅವರೇ ಅಕ್ರಮಗಳನ್ನು ನಾವು ನಮ್ಮ ಮೇಲೆ ಹೇಳಿದ್ದಾರೆನ್ನುವುದರ ಬಗ್ಗೆ ನಾನು ಉದಾಹರಣೆ ಕೊಡುತ್ತಿದ್ದೇನಷ್ಟೆ. ಇದು ನನ್ನ ಪಾರ್ಯಾಯದ ಪ್ರಶ್ನೆ. ತಮಗೆ ಪೊಟ್ ಹಾಕಿಲ್ಲವೆಂದು ಹಾಡು ಹಗಲೇ ಆ ಹರಿಜನ ಮಹಿಳೆಯನ್ನು ಎಳೆದುಕೊಂಡು ಹೋದರು. ಅವರು ಹೇಗೆ ಅನ್ಯಾಯ ಮಾಡಿ ನಮ್ಮ ಮೇಲೆ ಗೂಬೆ ಕೂರಿಸುತ್ತಾರೆಂಬುದನ್ನು ಹೇಳುತ್ತಿದ್ದೇನೆ. ಎರಡನೆಯದಾಗಿ, ದೊಡ್ಡಗೆಂಡಗೆರೆ ಎಂಬುದೊಂದು ಪಂಚಾಯತಿ. ಅಲ್ಲಿಯೂ ಚುನಾವಣೆ ನಡೆಯಿತು. ೧೩ ಜನ ಸದಸ್ಯರು ಆಯ್ಕೆಯಾಗಿದ್ದು, ಅವರಲ್ಲಿ ೧೧ ಜನರು ನಮ್ಮ ಪಕ್ಷದವರಾಗಿದ್ದರೆ ಉಳಿದ ಇಬ್ಬರು ಜನತಾ ದಳದವರು ಅರಿಸಿ ಬಂದಿದ್ದರು. ಅಲ್ಲಿನ ಚುನಾವಣೆಯ ಸಂದರ್ಭದಲ್ಲಿ ನಮ್ಮ ಪಕ್ಷಕ್ಕೆ ಸೇರಿದ ಕೆಲವರನ್ನು ಎಳೆದುಕೊಂಡು ಹೋದರು. ಏಕೆಂದರೆ, ೬ ಮತಗಳಲ್ಲಿ ಗೆದ್ದು ಬಂದಿದ್ದೆವು. ಗೆದ್ದ ದಿವಸದಿಂದ ಇಲ್ಲಿಯವರೆಗೂ ಅವರಿಗೆ ಪೋಲೀಸ್ ರಕ್ಷಣೆ ಕೊಡಿಸಿದ್ದೇನೆ. ಹೀಗಿದ್ದರೂ ಜನತಾ ದಳದವರು ಕೆಲವು ಗೂಂಡಾಗಳನ್ನು ಬಿಟ್ಟು ದಿನಾ ಅವರ ಮನೆಗಳನ್ನು ಒಡೆಯುವ ಕೆಲಸದಲ್ಲಿ ನಿರತರಾಗಿ ಅನ್ಯಾಯವೆಸಗುತ್ತಿದ್ದಾರೆ.